OS.05/2014  PW.1.

ದಿನಾಂಕಃ 16-09-2017 ರಂದು ಸಾಕ್ಷಿಯನ್ನು ಕರೆಯಿಸಿ  ಪ್ರಮಾಣವಚನ ಭೋದಿಸಲಾಯಿತು.

ಪಾಟೀ ಸವಾಲು ಃ**1** ಮತ್ತು **4** ನೇ ಪ್ರತಿವಾದಿ ಪರ ನಾಯಾವಾದಿಗಳಾದ ಶ್ರೀ ಎ ಪಿ ಎಲ್  ರವರಿಂದ

ನನ್ನ ತಂದೆ ಕಳಸಪ್ಪಾ ತೀರಿಕೊಂಡು 45 ವರ್ಷ ಆಗಿದೆ.  ನನ್ನ ತಂದೆಗೆ 13 ಜನ ಮಕ್ಕಳು.  ದಾವಾ ಆಸ್ತಿಗಳು ಸುಶಿಲಾಬಾಯಿ ಸ್ವಂತ ಆಸ್ತಿಗಳು ಅಂದರೆ ಸರಿ.  1983 ರಲ್ಲಿ  CTS 5325 ಖುಲ್ಲಾ  ಜಾಗೆ ಅಂದರೆ ಸರಿ.  ನನ್ನ ಅಕ್ಕ ಸುಶಿಲಾಬಾಯಿ ಹೆಸರಿಗೆ ಖರೀದಿ ಮಾಡಲಾಗಿತ್ತು ಅಂದರೆ ಸರಿ. ನನ್ನ ಅಣ್ಣ ಜೈವಂತ ರಾಜಕೀಯ ಮಾಡುತ್ತಿದ್ದರು ಅಂದರೆ ಸರಿ.  1978 ರಲ್ಲಿ MLA ಇದ್ದರು.  1 ನೇ ಪ್ರತಿವಾದಿ ತನ್ನ ಅಕ್ಕನ ಹೆಸರಿಗೆ ಖರೀದಿ ಮಾಡಿದ್ದರು ಅಂದರೆ ಸುಳ್ಳು , ನನ್ನ ಅಕ್ಕ ಖರೀದಿ ಮಾಡಿದ್ದಳು. 1984 ರಲ್ಲಿ 1 ನೇ ಪ್ರತಿವಾದಿ ಹಾಗೂ ನನ್ನ ಅಕ್ಕ ಸುಶಿಲಾಬಾಯಿ ಒಂದು ಫರ್ಮ ಪ್ರಾರಂಭಿಸಿದರು ಅಂದರೆ ಸರಿ.  ಪಾರ್ಟನರಶಿಪ್ಪ ಫರ್ಮನಲ್ಲಿ CTS.5325 ನ್ನು ಉದ್ಯೋಗಕ್ಕಾಗಿ ಕೊಟ್ಟರು ಅಂದರೆ , ಸಾಕ್ಷಿಯು ನನ್ನ ಅಕ್ಕನ ಹೆಸರಿಗೆ ಇತ್ತು , ವ್ಯವಹಾರಕ್ಕೆ ಕೊಟ್ಟಿದ್ದರು. ಫರ್ಮನ್ನು ನಮ್ಮ ಸಹೋದರಿ ನಡೆಸುತ್ತಿದ್ದಳು.  ಫರ್ಮ ಹೆಸರಿಗೆ 1 ನೇ ಪ್ರತಿವಾದಿ ಮತ್ತು ಸುಶಿಲಾಬಾಯಿ ಸೇರಿ ಬ್ಯಾಂಕನಿಂದ ಸಾಲ ತೆಗೆದರು ಅಂದರೆ ಸುಳ್ಳು, ನನ್ನ ಅಕ್ಕ ಮಾತ್ರ ತೆಗೆದಿದ್ದರು. ಈ ವಿಚಾರ ಸುಳ್ಳು ಹೆಳುತ್ತಿದ್ದೇನೆಂದರೆ ಸರಿ ಅಲ್ಲ. ಪ್ರಶಾಂತ ಅಂತಾ ಫರ್ಮ ಹೆಸರು ಅಂದರೆ ಸರಿ.  ಬಾರ್ ಮತ್ತು ರೆಸ್ಟೊರೆಂಟ ನಡೆಸುತ್ತಿದ್ದರು ಅಂದರೆ ಸರಿ, ಅದು ಮುಂದೆ ಲುಕ್ಸಾನ ಆಯಿತು ಅಂದರೆ ಸರಿ ಅಲ್ಲ, ಕೆ ಎಸ್ ಎಫ್ ಸಿ ಗೆ ನನ್ನ ಅಕ್ಕ ಸುಶೀಲಾಬಾಯಿ ಹಣ ತುಂಬಿದ್ದಾಳೆ. 1 ನೇ ಪ್ರತಿವಾದಿ ಸಾಲ ತುಂಬಿದ್ದಾರೆಂದರೆ ಸರಿ ಅಲ್ಲ. ಸುಶಿಲಾಬಾಯಿ ಮುಂಬೈ ಇರುತ್ತಿದ್ದಳು ಎಂದರೆ ಸರಿ ಅಲ್ಲ, ಎರಡೂ ಕಡೆ ಇರುತ್ತಿದ್ದರು. 1 ನೇ ಪ್ರತಿವಾದಿ ಮಾತ್ರ ಫರ್ಮನ್ನು ನೋಡಿಕೊಳ್ಳುತ್ತಿದ್ದರು ಸುಶಿಲಾಬಾಯಿ ಯಾವತ್ತು ಬಂದಿಲ್ಲ ಅಂದರೆ ಸರಿ ಅಲ್ಲ.  ಸಾಲವನ್ನು 1 ನೇ ಪ್ರತಿವಾದಿ ತೀರಿಸಿದ್ದಾರೆಂದರೆ ಸರಿ ಅಲ್ಲ.  ನನ್ನ ಅಕ್ಕ ಸುಶಿಲಾಬಾಯಿಗೆ ಮಕ್ಕಳು ಇರಲಿಲ್ಲ ಅಂದರೆ ಸರಿ.  ಮದುವೆ ಆಗಿರಲಿಲ್ಲ. ಸುಶಿಲಾಬಾಯಿ ತೀರಿಕೊಳ್ಳುವ ಪೂರ್ವದಲ್ಲಿ ನನ್ನ ತಾಯಿ ತೀರಿಕೊಂಡಿದ್ದಳು.  2011 ರಲ್ಲಿ ಸುಶಿಲಾಬಾಯಿ ತೀರಿಕೊಂಡ ನಂತರ 1 ನೇ ಪ್ರತಿವಾದಿ ಮಾತ್ರ ಫರ್ಮನ್ನು ನಡೆಸುತ್ತಿದ್ದರು ಅಂದರೆ ಸರಿ ಅಲ್ಲ , ನಾವು ನಡೆಸುತ್ತಿದ್ದೆವು.  ಫರ್ಮಗೆ ನಾನು ಸಂಬಂಧ ಇಲ್ಲ ಅಂದರೆ ಸರಿ ಅಲ್ಲ. 2008 ರಲ್ಲಿ ಸುಶಿಲಾಬಾಯಿ ಮೃತ್ಯುಪತ್ರ ಮಾಡಿದ್ದಾಳೆ ಅಂತಾ ನಾನು ಅರ್ಜಿ ಕೊಟ್ಟಿದ್ದೆ ಅಂದರೆ ಸರಿ ಅಲ್ಲ.  2 ನೆ ಪ್ರತಿವಾದಿ ಕೂಡಾ ಮೃತ್ಯುಪತ್ರ ಆಧಾರದ ಮೇಲೆ ತನ್ನ ಹೆಸರಿಗೆ ಆಸ್ತಿ ಮಾಡಲು ಅರ್ಜಿ ಕೊಟ್ಟಿದ್ದಳು ಅಂದರೆ ಸರಿ, ಖೊಟ್ಟಿ ಮೃತ್ಯುಪತ್ರ ಮಾಡಿಕೊಂಡಿದ್ದರು.  2008 ರ ಮೃತುಪತ್ರ ಖೊಟ್ಟಿ ಇದೆ ಅಂದರೆ ಸರಿ ಅಲ್ಲ.  1 ನೇ ಪ್ರತಿವಾದಿ ನನ್ನ ವಿರುದ್ಧ ಕೇಸು ಹಾಕಿದ್ದರು ಅಂದರೆ ಸುಳ್ಳು ಕೇಸು ಹಾಕಿದ್ದರು.  ಸುಶಿಲಾಬಾಯಿ ಖೊಟ್ಟಿ ಸಹಿಗಳು ಇವೆ ಅಂತಾ ಫೊರೆನ್ಸಿಕ್ಕ ವರದಿ ಬಂದಿದೆ ಅಂದರೆ ಸರಿ ಅಲ್ಲ.  ಕೇಸು ನಡೆದಿದೆ ಅಂದರೆ ಸರಿ.  ಖೊಟ್ಟಿ ಕೇಸು ಹಾಕಿದ್ದಾರೆ CC.No.24/2016. ನಾನು ಮತುತ 2 ನೇ ಪ್ರತಿವಾದಿ ಕೊಟ್ಟ ಅರ್ಜಿಗಳನ್ನು ತಹಶೀಲದಾರ ಆಫಿಸದಿಂದ ಕಿತ್ತು ಹಾಕಿ 1 ನೇ ಪ್ರತಿವಾದಿಯ ಹೆಸರು ಫರ್ಮ ವತಿಯಿಂದ ಇರಲು ಆದೇಶ ಆಗಿದೆ ಅಂದರೆ ಸರಿ. MLA ಇರುವ ಕಾರಣ ಮಾಡಿಸಿಕೊಂಡಿದ್ದಾರೆ. ನಾನೂ ಕೂಡಾ MLA ಗೆ ನಿಂತಿದ್ದೆ ಅಂದರೆ ಸರಿ , ಆರಿಸಿ ಬಂದಿಲ್ಲ.  ನಾನು ಮುನಸಿಪಾಲ್ಟಿ ಮೆಂಬರ ಇದ್ದೆ ಅಂದರೆ ಸರಿ.  1 ನೇ ಪ್ರತಿವಾದಿ ಸಂಬಾಯಿತ ವ್ಯಕ್ತಿ ಆತನಿಗೆ ಕಿರಿಕಿರಿ ಮಾಡುತ್ತಿದ್ದೇನೆಂದರೆ ಸರಿ ಅಲ್ಲ.

ಮುಂದಿನ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

Sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ